॥ ಶ್ರೀಲಕ್ಷ್ಮೀಹಯಗ್ರೀವಾಯ ನಮಃ ॥

॥ ಶ್ರೀಮಧ್ವರಾಜಗುರುಭ್ಯೋ ನಮಃ ॥

॥ ಶ್ರೀವಾದಿರಾಜಗುರುಭ್ಯೋ ನಮಃ ॥

# ॥ ಶ್ರೀಜಯತೀರ್ಥರಸ್ತುತಿ ॥

## ಶ್ರೀವಿಜಯದಾಸಾರ್ಯಕೃತ – ಸುಳಾದಿ

ರಾಗ ಭೈರವಿ ಧ್ರುವತಾಳ

ಜಯರಾಯ ಜಯರಾಯ, ಜಯದೇವಿ ಅರಸನ್ನಾ –। ಶ್ರಯಮಾಡಿಕೊಂಡಿಪ್ಪ ತಪೋವಿತ್ತಪ ।
ಭಯವ ಪರಿಹರಿಸಿ , ಭವದೂರರ ಹರಿ ಭ–।ಕ್ತಿಯ ಕೊಡು ಜ್ಞಾನವೈರಾಗ್ಯದೊಡನೆ ।
ದಯದೃಷ್ಟಿಯಿಂದ ನೋಡು, ಕಾಪಾಡು ಮಾತನಾಡು । ಲಯವರ್ಜಿತವಾದ ವೈಕುಂಠಕೆ ।
ಸ್ವಯಮಾಗಿ ಮಾರ್ಗತೋರು ಸಜ್ಜನರೊಳಗಿಟ್ಟು । ಜಯವ ಪಾಲಿಸು ಎನಗೆ ಯತಿಕುಲರನ್ನ ।
ಅಯುತಕ್ಕಾದರು ನಾನು ಅಹಿಕ ಸೌಖ್ಯವನೊಲ್ಲೆ । ಬಯಸುವೆ ಸತತದಲ್ಲಿ ಹರಿಯನಾಮ ।
ತ್ರಯಗಳ ನಾಲಿಗೆಯಲಿ ನೆನದು ನೆನದು ಕರ್ಮ । ಕ್ಷಯವಾಗುವಂತೆ , ಕ್ಷಿಪ್ರದಲ್ಲಿ ಬಿಡದೆ ।
ಪ್ರಯತ್ನವೆಂಬೋದಿದಕೆ ಸಾರ್ಥಕವಾಗಲಿ । ಪಯೋನಿಧಿಸುತೆ ರಮಣ ಮನದೊಳು ನಿಲ್ಲಲು।
ಪಯಃಪಾಯನದಿಂದಧಿಕ ನಿಮ್ಮ ದರುಶನವೆನಗೆ । ಪ್ರಿಯಮತ್ತೊಂದಾವದಿಲ್ಲ ಯಿದೆ ಬಲುಲಾಭ ।
ಗಯ ಕಾಶಿ ತ್ರಿಸಂಗಮ ಮೊದಲಾದ ತೀರ್ಥಕ್ಷೇತ್ರ । ನಯದಿಂದ ಮಾಡಿದ ಫಲವಪ್ಪುದು ।
ಪಯೋಧರಗಳ ತಿನದಂತೆ ಮಾಳ್ಪದು ಹೃ। ದಯದೊಳಗಿಪ್ಪದೆನಗೆ ಇದೆ ಏಕಾಂತ ।
ಭಯಕೃದ್ಭಯನಾಶನ ವಿಜಯವಿಠ್ಠಲನ ಸೇ–। ವೆಯ ಮಾಡುವ ಸದ್ಗುಣ ಶೀಲ ಸುಜನಪಾಲ ॥ ೧ ॥

### ॥ ಮಟ್ಟತಾಳ ॥

ಆವ ಜನುಮದ ಪುಣ್ಯಫಲಿಸಿತು ಎನಗಿಂದು । ರಾವುತನಾಗಿದ್ದ ಜಯತೀರ್ಥರಕಂಡೆ ।
ದೇವಾಂಶರು ಇವರ ಸ್ವರೂಪವನ್ನು । ಭಾವದಿಂದಲಿ ತಿಳಿದು ಕೊಂಡಾಡುವ ಬಲು ಧನ್ಯ ।
ಪಾವಿನಪರಿಯೆನ್ನು ಇಲ್ಲಿ ಇರುತಿಪ್ಪ । ಕಾವುತ ಭಕುತರನು ಪಾವನಗೈಸುವ ।
ದೇವದೇವೇಶ ಸಿರಿ ವಿಜಯವಿಠಲನಂಘ್ರಿ । ತಾವರೆ ಭಜಿಸುವ ನಿಷ್ಕಾಮಕ ಮೌನಿ ॥ ೨ ॥

### ॥ ತ್ರಿಪುಟತಾಳ ॥

ವೈಷ್ಣವಜನ್ಮ ಬಂದುದಕಿದೆ ಸಾಧನ । ವಿಷ್ಣುವಿನ ಭಕುತಿ ದೊರಕಿದುದಕೆ ।
ನಷ್ಟವಾಯಿತು ಎನ್ನ ಸಂಚಿತಾಗಾಮಿಕರ್ಮ । ಕಷ್ಟದಾರಿದ್ರಗಳು ಹಿಂದಾದವೊ ।
ತುಷ್ಟನಾದೆನು ಎನ್ನಕುಲಕೋಟಿ ಸಹಿತ ಅ–। ನಿಷ್ಟಮಾರ್ಗಕೆ ಇನ್ನು ಪೋಗ ನಾನು ।
ಸೃಷ್ಟಿಯೊಳಗೆ ಇವರ ದರ್ಶನವಾಗದಲೆ । ಸ್ಪಷ್ಟವಾದ ಜ್ಞಾನಪುಟ್ಟದೈಯ್ಯಾ ।
ಇಷ್ಟು ಕಾಲಬಿಡದೆ ಮುಂದೆ ಮಾಡುವ ಬಲು । ನಿಷ್ಠೆಗೆ ಅನುಕೂಲ ತಾತ್ವಿಕರು ।
ಶಿಷ್ಟಾಚಾರವನ್ನು ಮೀರದಲೆ ನಿಮ್ಮ । ಇಷ್ಟಾರ್ಥ ಬಯಸುವುದು ಉಚಿತದಲ್ಲಿ ।

ವೈಷ್ಣವಾಚಾರ್ಯರ ಮತ ಉದ್ಧಾರಕರ್ತಾ । ಭ್ರಷ್ಟವಾದಿಗಳನ್ನು ನುಗ್ಗಲೊತ್ತಿ ।
ಕೃಷ್ಣವಂದಿತ ನಮ್ಮ ವಿಜಯವಿಠಲರಾಯನ । ಅಷ್ಟಕರ್ತೃತ್ವವ ಸ್ಥಾಪಿಸಿದ ಧೀರ ॥ ೩ ॥

॥ ಅಟ್ಟತಾಳ ॥

ಕುಶರಾಯ ಇಲ್ಲಿ ತಪಸುಮಾಡಿದಂಥ । ವಸತಿಯ ನೋಡಿ ದಿಗ್ದೇಶ ಜಯಿಸಿ ಮಾ ।
ನಸದಲ್ಲಿ ತಿಳಿದು ಅಕ್ಷೋಭ್ಯತೀರ್ಥರು ಇಲ್ಲಿ । ನಸುನಗುತಲೆ ವಾಸವಾದರು ಬಿಡದಲೆ ।
ಋಷಿಕುಲೋತ್ತಮರಾದ ಜಯರಾಯರು ನಿತ್ಯ । ಬೆಸನೆ ಬೆಸನೆ ಬಂದು ಗುಪ್ತದಲ್ಲಿ ಪೂ-।
ಜಿಸುವರು ಪ್ರೀತಿಲಿ ಏನಂಬೆನಾಚರ್ಯ । ಶಶಿವರ್ನದಂತೆ ಪೊಳೆವ ದರುಶನ ಗ್ರಂಥ ।
ರಸಪೂರಿತವಾಗಿ ವಿಸ್ತರಿಸಿದರು ವಿ । ಕಸಿತವ ಮಾಡಿ ಕರದ ಕನ್ನಡಿಯಂತೆ ।
ಕುಶಲ ಮಾನವರಿಗೆ ಜ್ಞಾನ ಹೆಚ್ಚುವಂತೆ । ವಸುಧಿಯೊಳಗೆ ನಮ್ಮ ವಿಜಯವಿಠ್ಠಲರೇಯ ।
ವಶವಾಗುವುದಕ್ಕೆ ಪ್ರಸಾದ ಮಾಡಿದರು ॥ ೪ ॥

॥ ಆದಿತಾಳ ॥

ಈ ಮುನಿವೊಲಿದರೆ ಅವನೆ ಭಾಗ್ಯವಂತ । ಭೂಮಿಯೊಳಗೆ ಮುಕ್ತಿ ಯೋಗ್ಯನೆನಿಸುವನು ।
ಭೀಮಭವಾಂಬುಧಿ ಬತ್ತಿಪೋಗುವದು ನಿ । ಸ್ಸೀಮನಾಗುವ ಪಂಚಭೇದಾರ್ಥಪ್ರಮೇಯದಲ್ಲಿ ।
ತಾಮಸ ಜನರಿಗೆ ಭಕ್ತಿಪುಟ್ಟದು ದುಃ । ಖಾ ಮಹೋದಧಿಯೊಳು ಸೂಸುತಲಿಪ್ಪರು ।
ಸ್ವಾಮಿ ಈಗಲೆ ಬಂದು ದುರುಳ ಮನುಜನ್ನ ನೋಡಿ । ನಾ ಮೊರೆಯಿಡುವೆನು ಕಾಯೋ ಕರುಣದಲ್ಲಿ ।
ಯಾಮ ಯಾಮಕೆ ನಿಮ್ಮ ಸ್ಮರಣೆ ಪಾಲಿಸಿ ಉ । ತ್ತಮ ಬುದ್ಧಿಯಕೊಟ್ಟು ಕೃತಾರ್ಥನ್ನ ಮಾಡು ।
ರಾಮ ಸುಗುಣಧಾಮ ವಿಜಯವಿಠಲರಾಯನ । ನಾಮ ಕೊಂಡಾಡುವ ಟೀಕಾಚಾರ್ಯ ॥ ೫ ॥

॥ ಜತೆ ॥

ಮೇಘನಾಥ ಪುರಕತುರ ವೇಣಿ ವಾಸ । ರಾಘವೇಶ ವಿಜಯವಿಠಲನ್ನ ನಿಜದಾಸ ॥ ೬ ॥

॥ ಶ್ರೀಜಯತೀರ್ಥಗುರ್ವಂತರ್ಗತ ಶ್ರೀವಾದಿರಾಜಗುರ್ವಂತರ್ಗತ ಶ್ರೀಮಧ್ವೇಶಾರ್ಪಣಮಸ್ತು ॥